<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>

**<u>SC.286/2025</u>**

ಪಿರ್ಯಾದುದಾರರು : ಸರ್ಕಾರದ ಪರ ಆವಲಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿತರು : ಸುಜೀತ್ ಬಿಸ್ವಾಸ್,
ತಂದೆ: ದಿಲೀಪ್ ಬಿಸ್ವಾಸ್,
ವಯಸ್ಸು 23 ವರ್ಷ
ವಾಸ: ಬಡ್ಕುಲ್ಲಾ, ತಾರೇರ್ ಪುರ್ ಪಿ.ಎಸ್.,
ನಡಿಯ, ಪಶ್ಚಿಮ ಬಂಗಾಳ- 741 121

<u>ದೋಷಾರೋಪಣೆ</u>

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಸುಜೀತ್ ಬಿಸ್ವಾಸ್ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಅವಲಹಳ್ಳಿ ಪೊಲೀಸ್ ಠಾಣೆ ಸರಹದ್ದು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಾರಗೊಂಡನಹಳ್ಳಿ ಗ್ರಾಮದ ಜಿ.ಎನ್.ಆರ್ ಲೇಔಟ್ ನಲ್ಲಿ ರವಿಕುಮಾರ್ ವಿ. ಈಶ್ವರಮ್ಮ ರವರ ಮನೆಯಲ್ಲಿ ದಿನಾಂಕ 22.06.2025 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಡ್ರಿಂಕ್ಸ್ ಮಾಡುತ್ತಿರುವ ಸಮಯದಲ್ಲಿ ಮೃತ ತಾರಕ್ ಮಾಲಕರ್ ರವರ ಮೇಲೆ ಡ್ರಿಂಕ್ಸ್ ಚೆಲ್ಲಿದ ವಿಚಾರದಲ್ಲಿ ಮೃತ ತಾರಕ್ ಮಾಲಕರ್ ರವರು ಕೆನ್ನೆಗೆ ಹೊಡೆದರೆಂಬ ದ್ವೇಷವನ್ನಿಟ್ಟುಕೊಂಡಿದ್ದು ನಂತರ ದಿನಾಂಕ 23.06.2025 ರಂದು ಬೆಳಗಿನ ಜಾವ 03-00 ಗಂಟೆಯಿಂದ 03-30 ಗಂಟೆಯ ನಡುವಿನ ಸಮಯದಲ್ಲಿ ಆರೋಪಿಯಾದ ನೀನು ನಿನ್ನ ಹೆಂಡತಿಯ

ಬಗ್ಗೆ ಕೆಟ್ಟದಾಗಿ ಮಾತನಾಡಿ ನಿನ್ನ ಹೆಂಡತಿಯನ್ನು ಬಿಡುವುದಿಲ್ಲ ಎಂದು ಹೇಳಿದ್ದು ಮತ್ತು ಮೃತ ದ್ವೇಷದಿಂದ ತಾರಕ್ ಮಾಲಕರ್ ರವರ ಮೇಲೆ ಜಗಳ ತೆಗೆದು ತಳ್ಳಿ ಕೆಳಗೆ ಬೀಳಿಸಿ ನಂತರ ಮೃತಳ ಎದೆಯ ಮೇಲೆ ಕುಳಿತುಕೊಂಡು ಮೃತ ತಾರಕ್ ಮಾಲಕರ್ ರವರ ಕುತ್ತಿಗೆಗೆ ಬಿಗಿದು ಕೊಲೆ ಮಾಡಿ ನಂತರ ಮನೆಯಿಂದ ಮೃತ ದೇಹವನ್ನು ಟವಲ್ ಸಮೇತ ಎಳೆದುಕೊಂಡು ಹೋಗಿ ಮನೆಯ ಮುಂಬಾಗವಿರುವ ಗೇಟ್ ಬಳಿ ಚರಂಡಿಯಲ್ಲಿ ಹಾಕಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 103 ರನ್ವಯ ಅಪರಾಧ ಮಾಡಿರುತ್ತೀರಿ

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 19 ನೇ ಜನವರಿ, 2026)**

**(ಶ್ರೀಮತಿ ಬಿ.ಎಸ್.ರೇಖಾ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.